ತಳ್ಳಿಬಿಡುತ್ತದೆ? ಮನುಷ್ಯರೊಳಗೆ ರಾಕ್ಷಸತನ ಮತ್ತು ದೈವತ್ವ ಒಟ್ಟಿಗೇ ಇರುವುದು ಹೇಗೆ ಸಾಧ್ಯ? ಮನುಷ್ಯ ಬದುಕಿನ ದುರಂತದ ಮೂಲ ಸ್ವಾರ್ಥವೋ ಅಸಹಾಯಕತೆಯೊ? ಆನಂದ ಎನ್ನುವುದು ಮನಃಸ್ಥಿತಿಯೋ ಕಾರ್ಯ ಕಾರಣ ಸಂಬಂಧದ್ದೋ? ಬದುಕು ಮತ್ತು ಸನ್ನಿವೇಶಗಳು ಅವುಗಳ ಸ್ವರೂಪದಲ್ಲಿ ಸರಳ, ನಾವು ಅವನ್ನು ಜಟಿಲಗೊಳಿಸಿಕೊಳ್ಳುತ್ತೇವೆ ಎನ್ನುವುದು ನಿಜವೆ?

ತೀರ ಪ್ರಾಥಮಿಕ ಎನ್ನಿಸುವ ಈ ಎಲ್ಲ ವಿಚಾರ ಮತ್ತು ಭಾವಗಳು ಕೆ.ಕೆ. ಗಂಗಾಧರನ್ ಅವರ 'ಮಲಯಾಳಂ ಕತೆಗಳು' ಅನುವಾದಿತ ಕೃತಿಯನ್ನು ಓದಿದಾಗ ಹಾದುಹೋಗುತ್ತವೆ. ಇಲ್ಲಿನ ಕತೆಗಳ ಆಯ್ಕೆಯಲ್ಲಿಯೇ ಒಂದು ವಿನ್ಯಾಸವಿದೆ. ಅದು ಅನುವಾದಕರ ಪ್ರಜ್ಞಾಪೂರ್ವಕ ಪ್ರಯತ್ನವೂ ಇರಬಹುದು. ಇಲ್ಲಿನ 25 ಕತೆಗಳಲ್ಲಿಯೂ ಎದ್ದು ಕಾಣುವ ಕೆಲವು ಸಾಮ್ಯಗಳಿವೆ. ಎರಡನೆಯ ಓದಿನ ಹೊತ್ತಿಗೆ, ಭಿನ್ನ ಲೇಖಕರ, ಭಿನ್ನ ಕಾಲಮಾನಗಳ ಇಲ್ಲಿನ ಕತೆಗಳು ಒಂದು ಇನ್ನೊಂದರ ಜೊತೆ ಮಾತನಾಡುತ್ತಾ ಹೋಗುವ ಪರಿ ಆಶ್ಚರ್ಯ ಹುಟ್ಟಿಸುತ್ತದೆ. ಈ ಪರಸ್ಪರ ಸಂವಾದ ಏರ್ಪಡುವುದು ಇಲ್ಲಿನ ಕತೆಗಳು ಪಾಲಿಸಿರುವ ಒಂದು ತಾತ್ವಿಕತೆಯಿಂದ, ಅಥವಾ ಒಂದೇ ತಾತ್ವಿಕತೆಯ ಕತೆಗಳನ್ನು ಆರಿಸಿಕೊಂಡಿರುವ ಅನುವಾದಕರ ಆಯ್ಕೆಯಿಂದ.

ಇಲ್ಲಿನ ಯಾವ ಕತೆಯೂ ಸಂಕೀರ್ಣ ವಿನ್ಯಾಸದ್ದಲ್ಲ. ಅನುಭವಗಳ ಸಾಧ್ಯವಿದ್ದಷ್ಟೂ ಸರಳವಾದ ನಿರೂಪಣೆ ಇರುವ ಕತೆಗಳು ಇವು. ಅನುಭವವನ್ನು ಹಲವು ಮಗ್ಗುಲುಗಳಲ್ಲಿ ಶೋಧಿಸುವ ಪ್ರಯತ್ನಕ್ಕೆ ಹೋಗದೆ, ನೇರ, ಶಕ್ತವಾದ, ಸಾಂದ್ರವಾದ ನಿರೂಪಣೆಯೇ ಓದುಗರಲ್ಲಿ ಅದರ ಸಂಕೀರ್ಣತೆಯನ್ನು ಹೊಳೆಯಿಸುವಲ್ಲಿ ಯಶಸ್ವಿಯಾಗುವ ಕತೆಗಳು ಇವು. ಅನುದಿನದ ದಂದುಗಗಳನ್ನು, ಸಾಮಾನ್ಯವೋ ಅತಿ ಸಾಮಾನ್ಯವೋ ಎನಿಸುವ ಸಂದರ್ಭಗಳು ಅದೇ ಸಾಮಾನ್ಯ ಬಟ್ಟೆ ತೊಟ್ಟು ನಮ್ಮೆದುರಿಗೆ ನಿಲ್ಲುತ್ತವೆ. ನಿಲ್ಲುವ ಭಂಗಿಯಲ್ಲಿಯೇ 'ಕಂಡೆಯಾ ಸತ್ಯವನ್ನು, ಇದೇ ನೋಡು ಬದುಕು' ಎಂದು ಪಿಸುಗುಡುತ್ತವೆ.

ಸದಾ ಘನ ಗಂಭೀರವಾದ ತಾತ್ವಿಕ ಕೃತಿಗಳ ಒಡನಾಟದಲ್ಲಿರುವ ಕಾರಣಕ್ಕೋ ಸುತ್ತಲಿನ ವಾತಾವರಣದ ಅನಗತ್ಯ ಗೋಜಲು, ಅದರ ಉಪ ಉತ್ಪನ್ನವಾದ ಹಿಂಸೆಯ ಕಾರಣಕ್ಕೋ, ಈ ಕೃತಿಯ ಮತ್ತು ಸಾಹಿತ್ಯದ ಹುಟ್ಟು ಮಾಂತ್ರಿಕತೆಯ ಕಾರಣಕ್ಕೋ ಈ ಪುಸ್ತಕ ತುಂಬ ಆಪ್ತವಾಯಿತು.

ತಕಳಿ ಶಿವಶಂಕರ ಪಿಳ್ಳೈಯವರಿಂದ ಆರಂಭವಾಗಿ ಕೆ.ಕೆ. ರಾಘವನ್ ಅವರ ತನಕ ಇಪ್ಪತ್ತು ಕತೆಗಾರರ ಇಪ್ಪತ್ತೈದು ಕತೆಗಳು ಇಲ್ಲಿವೆ. ದೀರ್ಘ ಎನ್ನಬಹುದಾದ ಒಂದು ಕತೆಯೂ ಇಲ್ಲಿಲ್ಲ. ತಕಳಿಯವರ ಕತೆ 'ದಲ್ಲಾಳಿ' ಒಂದು ಅಪೂರ್ವ ಕತೆ. ತಲೆಹಿಡುಕನೊಬ್ಬನ ಈ ಕತೆ, ಬೇರೊಬ್ಬರ ದೌರ್ಬಲ್ಯಗಳನ್ನೇ ತನ್ನ ಜೀವನೋಪಾಯವಾಗಿ ಮಾಡಿಕೊಳ್ಳುವ, ಮೂರು ಕಾಸಿನ ಗೌರವವನ್ನೂ ಎಂದೂ ಪಡೆಯದ ದಲ್ಲಾಳಿಗೂ ಇರುವ ಬದುಕನ್ನು ತೋರಿಸುತ್ತದೆ. ಮಾತ್ರವಲ್ಲ, ಅವನೂ ಮನುಷ್ಯ, ಅಷ್ಟೇ ಯಾಕೆ 'ಸಾಚಾ' ಮನುಷ್ಯನೂ ಆಗಿರಬಹುದು ಎನ್ನುವ ಸಾಧ್ಯತೆಯನ್ನು ತೋರಿಸುತ್ತದೆ. ಮಾಸ್ತಿಯವರು ಸಾಹಿತ್ಯದ ಕಾರ್ಯಗಳಲ್ಲಿ 'ಮನಸ್ಸನ್ನು ತಿದ್ದುವುದು' ಒಂದು ಎನ್ನುತ್ತಾರೆ. ಹೆಣ್ಣೊಬ್ಬಳ ಸಹವಾಸಕ್ಕೆ ಹಾತೊರೆಯುವ ನಾಯಕ ದಲ್ಲಾಳಿಯನ್ನು ಉದ್ದಕ್ಕೂ ಸಂಶಯಿಸುತ್ತಲೇ ಹೋಗುತ್ತಾನೆ. ಅವನು ತನಗೆ ಟೋಪಿ ಹಾಕುತ್ತಿದ್ದಾನೆ ಎನ್ನುವ ಖಾತ್ರಿಯಲ್ಲಿಯೇ ಅವನೊಂದಿಗೆ ವ್ಯವಹರಿಸುತ್ತಾನೆ. ಆದರೆ ಈ ಸಂಶಯದಲ್ಲಿಯೂ ತನ್ನ ಗೀಳನ್ನು ಮಾತ್ರ ಆತ ಬಿಡಲಾರ. ಕಷ್ಟಪಟ್ಟು ಕೊನೆಯ ಆಯ್ಕೆಯ ಹೊತ್ತಿಗೆ ಹಿಂದೆ ಸರಿಯುತ್ತಾನೆ. ಇನ್ನು ಮೋಸ ಹೋಗುವುದು ಬೇಡ ಎಂದು. ಕೆಲವು ದಿನಗಳ ನಂತರ ಅದೇ ದಲ್ಲಾಳಿಯನ್ನು ದೋಣಿಯಲ್ಲಿ ಆತನ ಹೆಂಡತಿಯೊಟ್ಟಿಗೆ ನೋಡುತ್ತಾನೆ. ಇನ್ನೂ ಪೂರ್ತಿ ಮಾಯವಾಗದ, ಮರೆಯದ ಮನುಷ್ಯತ್ವದಲ್ಲಿ ಆತನ ಹೆಂಡತಿಯನ್ನು, ಆಕೆಯೊಂದಿಗಿನ ದಲ್ಲಾಳಿಯ ವ್ಯವಹಾರದಲ್ಲಿ ಈತನಿಗೆ ಆತ ಹೆಂಡತಿಯನ್ನು